ಸಿ.ಇ.ಟಿ. ವ್ಯವಸ್ಥೆ

2448(2889); ಡಾ॥ ರಫೀಕ್ ಅಹ್ಮದ್ .ಎಸ್. (ತುಮಕೂರು ನಗರ)

ಅ) ರಾಜ್ಯದಲ್ಲಿ ಸಿ.ಇ.ಟಿ. ವ್ಯವಸ್ಥೆಯನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ:

ಆ) ಸಿ.ಇ.ಟಿ ಅಡಿಯಲ್ಲಿ ಬರುವ ಕಾಲೇಜುಗಳು ಯಾವುವು (ಜಿಲ್ಲಾವಾರು ವಿವರ ನೀಡುವುದು)

ಇ) ಕಳೆದ 3 ವರ್ಷಗಳಲ್ಲಿ ಸಿ.ಇ.ಟಿ ಅಡಿಯಲ್ಲಿ ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಹೊರ ರಾಜ್ಯ ಮತ್ತು ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆಯ ವಿವರ ನೀಡುವುದು)

ಈ) ಕಳೆದ 3 ವರ್ಷಗಳಲ್ಲಿ ಸಿಇಟಿ ವತಿಯಿಂದ ವಿವಿಧ ಕೋಟಾದಡಿ ಹಂಚಿಕೆಯಾದ ಸೀಟುಗಳ ಸಂಖ್ಯೆ ಎಷ್ಟು (ಕಾಲೇಜುವಾರು ವಿವರ ನೀಡುವುದು)

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ರಾಜ್ಯದಲ್ಲಿ ಸಿಇಟಿ ವ್ಯವಸ್ಥೆಯನ್ನು 1994 ರಿಂದ ಪ್ರಾರಂಭಿಸಲಾಗಿದೆ.

ಆ) ಸಿಟಿಟಿ ಅಡಿಯಲ್ಲಿ ವೃತ್ತಿಪರ ಕೋರ್ಸುಗಳಾದ ಇಂಜಿನಿಯರಿಂಗ್, ವೈದ್ಯಕೀಯ, ದಂತವೈದ್ಯಕೀಯ, ಭಾರತೀಯ ವೈದ್ಯ ಪದ್ಧತಿಗಳು, ಫಾರ್ಮ ಸೈನ್ಸ್ ಮತ್ತು ಫಾರ್ಮಸಿ (ಬಿ–ಫಾರ್ಮ /ಫಾರ್ಮ–ಡಿ) ಕೋರ್ಸುಗಳಿಗೆ ಸೀಟು ಹಂಚಿಕೆ ಮಾಡಲಾಗುತ್ತಿದ್ದು, ಜಿಲ್ಲಾವಾರು ಕಾಲೇಜುಗಳ ಪಟ್ಟಿಯನ್ನು ಅನುಬಂಧ–ಎ ರಲ್ಲಿ ನೀಡಿದೆ.

ಇ) ಕಳೆದ 3 ವರ್ಷಗಳಲ್ಲಿ ಸಿಇಟಿ ಅಡಿಯಲ್ಲಿ ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ	ಹೊರ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ (ಗಡಿನಾಡು ಹೊರನಾಡು ಅಭ್ಯರ್ಥಿಗಳು)
2012	1,18,780	1388
2013	1,37,560	1355
2014	1,39,198	1333

ಈ) ಅನುಬಂಧ–ಬಿ ನಲ್ಲಿ ನೀಡಿದೆ.

ಕಾಮೆಡ್ .ಕೆ. ವ್ಯವಸ್ಥೆ

2449(2890); ಡಾ॥ ರಫೀಕ್ ಅಹ್ಮದ್ .ಎಸ್. (ತುಮಕೂರು ನಗರ)

ಅ) ರಾಜ್ಯದಲ್ಲಿ ಕಾಮೆಡ್–ಕೆ ವ್ಯವಸ್ಥೆಯನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ; ವೈದ್ಯಕೀಯ ಮತ್ತು ತಾಂತ್ರಿಕ ವಿಷಯಗಳ ಕುರಿತು ಸಂಪೂರ್ಣ ವಿವರ ನೀಡುವುದು;

ಆ) ಕಾಮೆಡ್–ಕೆ ಅಡಿಯಲ್ಲಿ ಬರುವ ಕಾಲೇಜುಗಳು ಯಾವುವು (ವಿವರ ನೀಡುವುದು);

ಇ) ಕಳೆದ 3 ವರ್ಷಗಳಲ್ಲಿ ಕಾಮೆಡ್–ಕೆ ಅಡಿಯಲ್ಲಿ ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಈ) ಈ ಅವಧಿಯಲ್ಲಿ ಕಾಮೆಡ್–ಕೆ ವತಿಯಿಂದ ಹಂಚಿಕೆಯಾದ ಸೀಟುಗಳ ಸಂಖ್ಯೆ ಎಷ್ಟು (ಕಾಲೇಜುವಾರು ವಿವರ ನೀಡುವುದು)?